(ಇಂದು ದಿನಾಂಕಃ 29-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲು 2 ನೇ ಎದುರುದಾರರ ಪರ ಶ್ರೀ R.S.K. ವಕೀಲರಿಂದಃ**

ಮೃತ ಕೃಷ್ಣ ನನ್ನ ಮಗ. ನನ್ನ ಮಗ ಗಣಿ ಕೆಲಸ ಮಾಡುತ್ತಿದ್ದ. ನಮ್ಮದೇಗಣಿ ಇದೆ ಅಲ್ಲಿಯೇ ಕೆಲಸ ಮಾಡುತ್ತಿದ್ದ. ಗಣಿಯಲ್ಲಿ ಕೆಲಸ ಮಾಡುತ್ತಿದ್ದ ಮತ್ತು ತಿಂಗಳಿಗೆ 22,000/- ಸಂಪಾದನೆ ಮಾಡುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕೃಷ್ಣನ ಮದುವೆ ಆಗಿರಲಿಲ್ಲ. ಅಪಘಾತ ಆಗಿ 2 ವರ್ಷಕ್ಕೆ ನನ್ನ ಮಗ ತೀರಿ ಹೋಗಿದ್ದಾರೆ. ಅಪಘಾತ ದಿನಾಂಕ 28-06-2019 ರಂದು ಆಗಿದೆ ಎಂದರೆ ಸರಿ. ನನ್ನ ಮಗ 11-02-2021 ರಂದು ತೀರಿ ಹೋಗಿದ್ದಾರೆ ಎಂದರೆ ಸರಿ. ನನ್ನ ಮಗ ಮೋಟಾರ ಸೈಕಲ್ ಮೇಲೆ ಸೇಡಂ ಗೆ ಹೋಗುತ್ತಿರುವಾಗ ಅಪಘಾತ ಆಗಿದೆ. ಮೋಟಾರ ಸೈಕಲ್ ನ್ನು ವೆಂಕಟ್ ಚಾಲನೆ ಮಾಡುತ್ತಿದ್ದರು. ನನ್ನ ಮಗ ಹಿಂಬದಿ ಸವಾರನಾಗಿದ್ದ. ವೆಂಕಟ್ ರವರಿಗೆ ಮೋಟಾರ ಸೈಕಲ್ ಚಾಲನೆ ಮಾಡಲು ಡಿ.ಎಲ್. ಇತ್ತು. ನಾನು ಸದರಿ ಡಿ.ಎಲ್ ನ್ನು ಹಾಜರು ಪಡಿಸಿಲ್ಲ. ಸೇಡಂ ಗೆ ಹೋಗುತ್ತಿರುವಾಗ ಎದುರುಗಡೆಯಿಂದ ಟಾಟಾ ಲಾರಿ ಬಂದು ಬೈಕಿಗೆ ಡಿಕ್ಕಿ ಪಡಿಸಿ ಅಪಘಾತ ಆಗಿದೆ. ಅಪಘಾತ ಲಾರಿ ಚಾಲಕ ಮತ್ತು ಮೋಟಾರ ಸೈಕಲ್ ಚಾಲಕನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ಅಪಘಾತ ರಸ್ತೆ ಮಧ್ಯೆದಲ್ಲಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ವೆಂಕಟ್ ನ ಬಳಿ ಬೈಕ್ ಚಾಲನೆ ಮಾಡಲು ಡಿ.ಎಲ್ ಇಲ್ಲದೆ ಮೋಟಾರ ಸೈಕಲನ್ನು ಅತೀ ವೇಗವಾಗಿ ಮತ್ತು ನಿಷ್ಕಾಳಜಿತನದಿಂದ ಚಾಲನೆ ಮಾಡಿಕೊಂಡು ಹೋಗಿ ಅಪಘಾತ ಮಾಡಿದ್ದಾನೆ ಎಂದರೆ ಸರಿಯಲ್ಲ. ಅಪಘಾತ ಆಗಿ 2 ದಿನದ ನಂತರ ಲಾರಿ ವಿರುದ್ಧ ಸುಳ್ಳು ದೂರು ನೀಡಿದ್ದೇವೆ ಎಂದರೆ ಸರಿಯಲ್ಲ. ನನ್ನ ಮಗನ ಬಲಕೈಗೆ ಮತ್ತು ಹಣೆಗೆ ಗಾಯಗಳಾಗಿತ್ತು. ಅಪಘಾತದ ನಂತರ ಚಿಂಚೋಳಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಅಲ್ಲಿಂದ ಹೆಚ್ಚಿನ ಚಿಕಿತ್ಸೆಗೆ ಹೈದರಾಬಾದಿಗೆ ಹೋದೆವು. ನನ್ನ ಮಗ ಹೈದರಬಾದ ಆಸ್ಪತ್ರೆಯಲ್ಲಿ 3-4 ದಿನ ಒಳರೋಗಿಯಾಗಿದ್ದ. ಅಲ್ಲಿ ವೈದ್ಯಕೀಯ ಚಿಕಿತ್ಸೆಗೆ 2 ವರೆ ಲಕ್ಷ ಖರ್ಚಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಭವಿಷ್ಯದ ಚಿಕಿತ್ಸೆಗೆ 1 ಲಕ್ಷ ರೂ. ಬೇಕು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೈದರಾಬಾದ ಆಸ್ಪತ್ರೆ ನಂತರ

ಬೇರೆ ಕಡೆ ಚಿಕಿತ್ಸೆ ಪಡೆದಿಲ್ಲ. ನನ್ನ ಮಗ ತೀರಿ ಹೋಗುವ ಮುಂಚೆ ಬಲಗೈ ಯಲ್ಲಿನ ಪರಿಕರಗಳನ್ನು ತೆಗೆಯುವ ಸರ್ಜರಿ ಸಲುವಾಗಿ ಒಳರೋಗಿಯಾಗಿದ್ದ ಎಂದರೆ ಸರಿ.

ESI ಆಸ್ಪತ್ರೆಯವರು ನೀಡಿರುವ ವರದಿ ಪ್ರಕಾರ ನನ್ನ ಮಗ Heart attack ನಿಂದ ತೀರಿ ಹೋದರು ಎಂದರೆ ಸರಿಯಲ್ಲ. ಸದರಿ ವರದಿಯಲ್ಲಿ ನನ್ನ ಮಗ ಅಪಘಾತದಲ್ಲಿ ಆದ ಗಾಯಗಳಿಂದಾಗಿ ತೀರಿ ಹೋದರು ಎಂದು ಉಲ್ಲೇಖ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ಮಗನ ಸಾವಿಗೂ ಮತ್ತು ಅಪಘಾತದಲ್ಲಿ ಆದ ಗಾಯಗಳಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಮಗನ ಗಾಯಗಳಿಗೆ ಮಾತ್ರ ಪರಿಹಾರ ನೀಡಲು ಕಂಪನಿ ಜವಾಬ್ದಾರಿ ಇದ್ದು ಆತನ ಸಾವಿಗೆ ಪರಿಹಾರ ನೀಡಲು ಜವಾಬ್ದಾರಿ ಇಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಗಂಡ ಕೃಷ್ಣರವರ ಆದಾಯದ ಮೇಲೆ ಅವಲಂಬಿತರು ಆಗಿರಲಿಲ್ಲ ಎಂದರೆ ಸರಿಯಲ್ಲ. ನಾವು ಕೇಳಿರುವ ಪರಿಹಾರಕ್ಕೆ ಯಾವುದೇ ಆಧಾರ ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ,
ಚಿಂಚೋಳಿ.